ದಯನೀಯ ಸ್ಥಿತಿ ಯಾಕೆ ಬಂತು?
ತಲೆಗೂದಲು ಮುಕ್ಕಾಲುವಾಸಿ ನೆರೆತಿದ್ದು
ಬಿಟ್ಟರೆ, ಬೆನ್ನುಕೋಲು ಒಂದಿಷ್ಟು ಬಾಗಿದ್ದು
ಬಿಟ್ಟರೆ, ಗುರುತು ಹಿಡಿಯಲಾಗದಷ್ಟು
ಬದಲೇನಾಗಿರಲಿಲ್ಲ ಪುಣ್ಯಮ್ಮ. ಅದೇ
ವಾಟೆಗಳದಂತಾ ಸಪೂರದ ಮೈಕಟ್ಟು, ತುಟಿ
ಮೀರಿ ಮುಂಚಾಚಿಕೊಂಡ ಮೇಲು ಸಾಲಿನ
ಎರಡು ಹಲ್ಲುಗಳು, ಮಾಸಿದ ಸೀರೆ
ಸುತ್ತಿಕೊಂಡಿದ್ದ ಪುಣ್ಯಮ್ಮನ ಬಗಲಲ್ಲಿ ನೇತು
ಬಿದ್ದ ಜೋಳಿಗೆ. ಭಿಕ್ಷೆ ಎತ್ತುವುದಕ್ಕೆ ಮನೆ
ಬಾಗಿಲಿಗೆ ಬಂದಿದ್ದಳು ಪುಣ್ಯಮ್ಮ. ಗೆಯ್ದು
ಹೊಟ್ಟೆ ತುಂಬಿಸಿಕೊಳ್ಳುವ ತಾಕತ್ತು
ಕಮ್ಮಿಯಾಯಿತೋ ಅಥವಾ ಹೊಟ್ಟೆ
ಹೊರೆಯಲು ಇದು ಸುಲಭದ ದಾರಿ
ಅನಿಸಿತೋ? ಎಲ್ಲೋ ಮಲೆನಾಡಿನ
ಹಳ್ಳಿಮೂಲೆಯಲ್ಲಿದ್ದ ಪುಣ್ಯಮ್ಮ ಶಿವಮೊಗ್ಗಾ
ಪೇಟೆಗೆ ಬಳಿದುಕೊಂಡು ಬಂದಿದ್ದು ಹೇಗೆ?
ಮತ್ತು ಯಾಕೆ? ಅದು ಪರಿಚಯಸ್ಥರ ಮನೆ
ಎಂದು ಪತ್ತೆ ಮಾಡಿಕೊಂಡು ಬಂದವಳಲ್ಲ
ಪುಣ್ಯಮ್ಮ. ಎಲ್ಲರ ಮನೆಯ ಬಾಗಿಲು
ಬಡಿದು ಜೋಳಿಗೆ ಮುಂದೊಡ್ಡುವಂತೆ ನಮ್ಮ
ಮನೆಯ ಬಾಗಿಲನ್ನೂ ಬಡಿದಿದ್ದಳು.
ಅವಳನ್ನು ನೋಡಿ ನಾನೆಷ್ಟು ಬೆರಗಾದೆನೋ
ಅವಳಿಗೂ ಅಷ್ಟೇ ಬೆರಗು. ಅವಳನ್ನು ಕಂಡು
ಹೇಗೆ ನಾನು ಕ್ಷಣಾರ್ಧದಲ್ಲಿ ಗುರುತು
ಹಿಡಿದೆನೋ ಹಾಗೆ ನನ್ನ ಗುರುತೂ
ಹಿಡಿದಿದ್ದಾಳೆ ಪುಣ್ಯಮ್ಮ. "ಓ, ನೀವು
ಇಲ್ಲಿದೀರೇನ್ರೀ?" ಎನ್ನುತ್ತಾ 'ಓ...' ಎನ್ನುವ
ಆಶ್ಚರ್ಯಸೂಚಕ ಉದ್ಗಾರದೊಡನೆ ನನ್ನ
ಹೆಸರನ್ನೂ ಸೇರಿಸಿ ಆಪ್ತತೆಯನ್ನು
ನವೀಕರಿಸಿಕೊಳ್ಳಲೆತ್ನಿಸಿದವಳೊಡನೆ
ತುಟಿಯಂಚನ್ನು ಚೂರೂ ಹಿಗ್ಗಲಿಸದೆ
ಘನಘಂಭೀರವಾಗಿ ಗಂಟಲೊಳಗಿನಿಂದ
ಹೊರಟೂ ಹೊರಡದ
ಹೂಂಗುಟ್ಟುವಿಕೆಯೊಂದಿಗೆ ಪ್ರತಿಕ್ರಿಯಿಸಿದ್ದೆ.

